ಮೈಸೂರ ಗಜಿತ.

ನಂ. 21 ಸರ್ಕಾರದಿಂದ ಪ್ರಾಯಿಷ್ ಆದ್ದು. ಸ್ಯ 1884.

ಬೆಂಗಳೂರು, ಶನಿವಾರ, ಮೇ ತಾ॥ 24, ಸ್ಯ 1884.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದೀರ್ವಾರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಸೆಟಿಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟೆಂಡೆಂಟರು, ಕಾಂಟ್ರೋಲರವರು, ಮಣಿ ಆರ್ಡರ್ ಕಂಟ್ರೋಲರ್, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟೇರಿ ಸಿಕ್ರಿಟರಿಯವರು, ರಿಜಿಸ್ಟ್ರೇರ್ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲೆ ಡೈರೆಕ್ಟರು, ಅಂಚೇ ಬಕ್‌ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟುವ ಸೆಷ್ಷ ಜಡ್ಜೀರು, ಡಿ॥ ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಟೆಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸುಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇರ್ಷಗಳು—ಇಲ್ಲಾ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದೀವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆಗಳು.

ತಾರೀಖು 24ನೇ ಏಪ್ರೆಲ್ 1884.

ನಂ. 12.—ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗಾ ವ ಕಡೂರು ಡಿಸ್ಟ್ರಿಕ್ಟು ವುತ್ಪತ್ತೀ ಬಾಬತು ಇದರಡೀ ಕಂಡ ನಾಟೂಗಳು ಅಸಿಸ್ಟೆಂಟ್ ಕ್ವಸರ್‌ವೇಟರವರಿಂದ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಆಯಾ ತಾರೀಖಿನೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು:—

ಹರಾಜ್ ನಡಿಯತಕ್ಕ ಸ್ಥಳ.		ಹರಾಜಿನ ತಾರೀಖು.	ಕೆಗ್ಗದ ಬಿಲ್ಲಿಗಳು.	ಕಾಡುಮನುಷರ ಬಿಲ್ಲಿಗಳು.	ಕೆಗ್ಗ ಮತ್ತು ಕಾಡು ಮನುಷರ ಕೂಡಿಕೆಗಳು.	ಒಟ್ಟು.
ಸೊರಬ	(ಸೊರಬ ತಾಲ್ಲೂಕು)	10ನೇ ಮೇ 1884.	0	10	50	60
ಕೆರೆಹಳ್ಳಿ	ಡಿಟೋ	13 ಡಿಟೋ	15	50	200	265
ತೆಲಗದ್ದೆ	ಡಿಟೋ	15 ಡಿಟೋ	100	0	175	275
ಕಿರುಳಕೊಪ್ಪ	(ಶಿಕಾರಿಪುರ ತಾಲ್ಲೂಕು)	19 ಡಿಟೋ	10	200	200	410
ತುಂಬಿನಕಟ್ಟೆ	ಡಿಟೋ	21 ಡಿಟೋ	0	0	300	300
ಶಿಕಾರಿಪುರ	ಡಿಟೋ	23 ಡಿಟೋ	0	10	200	210
ಹೊನೂರು	ಡಿಟೋ	26 ಡಿಟೋ	0	0	400	400
ಚಿಕ್ಕ ಹಲವನ	(ಹೊನ್ನಾಳಿ ತಾಲ್ಲೂಕು)	29 ಡಿಟೋ	0	19	22	41
ಚನ್ನಗಿರಿ	(ಚನ್ನಗಿರಿ ತಾಲ್ಲೂಕು)	6ನೇ ಜೂನ್ 1884.	50	0	400	450
ಕುಂಟಿನಮಡು	(ತರೀಕೆರೆ ತಾಲ್ಲೂಕು)	11 ಡಿಟೋ	0	0	100	100
ತರೀಕೆರೆ	ಡಿಟೋ	13 ಡಿಟೋ	50	50	100	200
ಲಕ್ಕವಳ್ಳಿ	ಡಿಟೋ	16 ಡಿಟೋ	600	600	0	1200
ಕಣಬೂರು	(ಕೊಪ್ಪ ತಾಲ್ಲೂಕು)	20 ಡಿಟೋ	200	300	0	500
ಆಯನೂರು	(ಶಿವಮೊಗ್ಗ ತಾಲ್ಲೂಕು)	23 ಡಿಟೋ	50	150	100	300
ಶಿವಮೊಗ್ಗಾ	ಡಿಟೋ	25 ಡಿಟೋ	150	350	600	1100

ಹರಾಜಿನ ಷರತ್ತುಗಳು.—ಮೈಸೂರು ಗೆಜೆಟ್ಟಿನಲ್ಲಿ ಛಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂನ್ 12ನೇ ಮತ್ತು 20ನೇ ನಂಬರ್ ಇಸ್ತಿಹಾರ್‌ನಾಮೆ ಪ್ರಕಾರ ಇರುವದು ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವದು.

ತಾರೀಖು 12ನೇ ಮೇ 1884.

ನಂ. 25—ತಪ್ಪು ದುರಸ್ತು:—ಸ್ಯ 1883ನೇ ಇಸವೀ ನವಂಬರ್ 16ನೇ ಮತ್ತು ಂ 274ನೇ ನಂಬರ್‌ಉಳ್ಳ ದೀವಾನರವರ ಇಸ್ತಿಹಾರ್ ನಾಮೆಯ 7ನೇ ಕಲಂನಲ್ಲಿ ಗಂಗೇನಹಳ್ಳಿ ಯೆಂಬದಕ್ಕೆ ಬದಲಾಗಿ ಗಂಗದವಳ್ಳಿ ಯೆಂದು ಓದಿಕೊಳ್ಳತಕ್ಕದ್ದು.

ನಂ. 26—ಬೆಂಗಳೂರು ಡಿ॥ ಆನೆಕಲ್ ತಾಲ್ಲೂಕು ಅಮಲ್ದಾರ್ ಶ್ವೇತಾದ್ರಿಅಯ್ಯಂಗಾರ್ರಿಗೆ, ಮಾಹೇ ಮಜಕೂರ್ 6ನೇ ಮತ್ತು ಂ ಲಾಗಾಯತ್ ಬಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಆನೇಕಲ್ ಪೊಲಿಸ್ ಇನ್‌ಸ್ಪೆಕ್ಟರ್ ವಿಜಯರಂಗಂಮೊದಲಿಯಾರ್ರು, ಶ್ವೇತಾದ್ರಿಅಯ್ಯಂಗಾರ್ರ ಗೈರ್‌ಹಾಜರೀಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರ್ಯಂತ, ಆತಾಲ್ಲೂಕು ಚಾರ್ಜ್‌ನಲ್ಲಿ ಇಡಲ್ಪಟ್ಟು ಅಮಲ್ದಾರೀ ಕೆಲಸ ನೋಡುವ ಕಾಲದಲ್ಲಿ ಅವರಿಗೆ 3ನೇ ಕ್ಲಾಸ್ ಮಾಜಿಸ್ಟ್ರೇಟೆ ಅಧಿಕಾರಗಳು ಕೊಡಲ್ಪಟ್ಟಿರುತ್ತೆ.

ತಾರೀಖು 13ನೇ ಮೇ 1884.

ನಂ. 27—ಮೈಸೂರು ರೆವಿನ್ಯೂ ಸರ್ವೆ ಅ॥ ಸೂ॥ ಮೇ॥ ಡಿ. ಕವ್ವಿಯವರಿಗೆ, 1884ನೇ ಜುಲೈ 15ನೇ ಮತ್ತು ಂ ಲಾಗಾಯತ್ ಅಥವಾ ಸದರೀ ರಜಾವನ್ನು ಆವರು ಉಪಯೋಗಿಸಿಕೊಳ್ಳಬಹುದಾದ ತಾರೀಕ್ ಲಾಗಾಯತ್ ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೇ ಮೇ 1884.

ನಂ. 28—ತುಮಕೂರು ಡಿಸ್ಟ್ರಿಕ್ಟು ಜನರಲ್ ಅ॥ ಕಮ್ಮಿಷನರ್ ಮೆ॥ ಬಿ. ಜೆ. ಕೃಷ್ಣಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಕ್ ಲಾಗಾಯತ್ ಬಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 29—ಖಾ॥ ಬಹದೂರ್ ಮೆ॥ ಮಹಮ್ಮದ್ ಅಲ್ಲೀಯವರು, 1884ನೇ ಮೇ 9ನೇ ಮುಕ್ತಂ ಪೂರ್ವಾನ್ಹದಲ್ಲಿ ತುಮಕೂರು ಡಿಸ್ಟ್ರಿಕ್ಟ್ ವ ಟ್ರೈಜರೀ ಚಾರ್ಜನ್ನು, ಮೆ॥ ಪಿ. ಎಸ್. ಕೃಷ್ಣಮೂರ್ತಿ ಯವರಿಗೆ ಒಪ್ಪಿಸಿ ಯಿರುತ್ತಾರೆ.

ತಾರೀಖು 15ನೇ ಮೇ 1884.

ನಂ. 30—ಕಡೂರು ಡಿಸ್ಟ್ರಿಕ್ಟ್ ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ನರಸಿಹ್ಮಯ್ಯಂಗಾರಿಗೆ, ಅವರು ಸದರೀ ರಜಾವನ್ನು ಉಪಯೋಗಿಸಿ ಕೊಳ್ಳುವಂತೆ ಸಬ್ ಡಿವೀಜ್ಞ್ ಆಫೀಸರರಿಂದ ನಿಯಮಿಸಲ್ಪಡಬಹುದಾದ ತಾರೀಖು ಲಾಗಾಯತ್ 47 ದಿನಗಳ ಪ್ರಿವಿಲೀಜ್ ರಜಾ ಮಂಜೂರಾಗಿರುತ್ತೆ.

ಸದರೀ ತಾಲ್ಲೂಕು ಶಿರಸ್ತೇದಾರ್ ವೆಂಕಟರಮಣಯ್ಯನವರು, ಮಂಜರಾಬಾದ್ ತಾಲ್ಲೂಕು ಚಾರ್ಜ್‌ನಲ್ಲಿರುವಂತೆ ವೊಕರರ್‌ಮಾಡಲ್ಪಟ್ಟು, ಅವರು ಅಮಲ್ದಾರರಾಗಿ ಕೆಲಸ ನೋಡುವ ಕಾಲದಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ತಾರೀಖು 16ನೇ ಮೇ 1884.

ನಂ. 31—ಕಡೂರು ಡಿಸ್ಟ್ರಿಕ್ಟ್ ಅ॥ ಕಮ್ಮಿಷನರ್ ಮೆ॥ ನಾಗೇಶರಾಯರಿಗೆ, 2ನೇ ಕ್ಲಾಸ್ ಮಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತವೆ.

ನಂ. 32—ಅ॥ ಕಮ್ಮಿಷನರ್ ಮೆ॥ ಇ. ಸಿ. ಷಣ್ಮುಗವೇಲುಪಿಳ್ಳೈಯವರು, ಬೆಂಗಳೂರು ಟವ್ನ್ ಮಾಜಿಸ್ಟ್ರೇಟ್ ಕೋರ್ಟ್ ಚಾರ್ಜನ್ನು, 1884ನೇ ಮೇ 12ನೇ ಮುಕ್ತಂ ಪೂರ್ವಾನ್ಹದಲ್ಲಿ ಅ॥ ಕಮ್ಮಿಷನರ್ ಮೆ॥ ಮಹಮ್ಮದಲ್ಲಿ, ಖಾ॥ ಬಹದೂರ್ ಯವರಿಗೆ, ಒಪ್ಪಿಸಿ ಇರುತ್ತಾರೆ.

ನಂ. 33—ಅ॥ ಕಮ್ಮಿಷನರ್ ಮೆ॥ ಕುಪ್ಪುಸಾಮಿಮೊದಲಿಯಾರ್‌ರವರು, ಮೈಸೂರು ಡಿ॥ ಟ್ರೈಜರೀ ಚಾರ್ಜನ್ನು 1884ನೇ ಮೇ 6ನೇ ಮುಕ್ತಂ ಪೂರ್ವಾನ್ಹದಲ್ಲಿ, ಅ॥ ಕಮ್ಮಿಷನರ್ ಮೆ॥ ಚೆಲುವಯ್ಯಂಗಾರಿಗೆ ಒಪ್ಪಿಸಿ ಯಿರುತ್ತಾರೆ.

ನಂ. 34—ಶ್ರೀನಿವಾಸಪುರದ ಡಿ॥ ಅಮಲ್ದಾರ್ ಗುಲಾಂ ಅಹಮದ್‌ಖಾನರಿಗೆ, ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಕ್ ಲಾಗಾಯಿತ್ ಯಿರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಚಿಂತಾಮಣಿ ಪೋಲೀಸ್ ಇನ್‌ಸ್ಪೆಕ್ಟರ್ ಶಾಮರಾಯರು, ಗುಲಾಂ ಅಹಮದ್‌ಖಾನರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕ್ಕುಂ ಕೊಡುವ ತನಕ, ಶ್ರೀನಿವಾಸಪುರದ ಡಿ॥ ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ನಂ. 35—ತುಮಕೂರು ಡಿ॥ ಡೆಪ್ಯೂಟಿ ಕಮ್ಮಿಷನರ್ ಮೆ॥ ಪಿ. ಎಸ್. ಕೃಷ್ಣಮೂರ್ತಿಯವರಿಗೆ, 6ನೇ ಛಾವಣಿಯ ಸಿವಿಲ್ ಲೀವ್ ಕೋಡಿನ 134ನೇ ಸೆಕ್ಷನ್ ಅನುಸರಿಸಿ, 1884ನೇ ಏಪ್ರೆಲ್ 30ರ ಲಾಗಾಯತ್ ಮೇ 8ರವರಿಗೆ ಉಭಯದಿನಗಳೂ ಸೇರಿ ಬಗರೆರುಸುಂ ವಿಶೇಷ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜಿದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕ್ಕುಂ,

ಆರ್. ವಿಜಯೀಂದ್ರರಾವ್,

ಸೆಕ್ರಿಟೇರಿ.